IFLA

# ನಮ್ಮ ವೃತ್ತಿಯ ಪಂಚತಾರಾ ಅವಶ್ಯಕತೆಗಳು

ನಿರಂತರ ವೃತ್ತಿಪರ ಅಭಿವೃದ್ಧಿಗಾಗಿ ಐ.ಎಫ್.ಎಲ್.ಐ. ಮಾರ್ಗಸೂಚಿಗಳು: ತತ್ವಗಳು ಹಾಗು ಉತ್ತಮ ಅಭ್ಯಾಸಗಳು

## ಶಿಕ್ಷಣಾರ್ಥಿಗಳು ☆☆☆☆☆

ವಯಕ್ತಿಕ ವೃತ್ತಿಪರರು ನಿರಂತರ ಕಲಿಕೆಗೆ ಸದಾ ಸನ್ನದ್ಧರಾಗುವ ಮುಖಾಂತರ:

- ತಮ್ಮ ವಯಕ್ತಿಕ ವೃತ್ತಿಯಲ್ಲಿ ವಿಕಾಸ, ಅಭಿವೃದ್ಧಿ ಹಾಗು ಉನ್ನತಿ ಸಾಧಿಸುವದು.
- ತಾವು ಕೆಲಸಮಾಡುತ್ತಿರುವ ಸಂಸ್ಥೆ ತನ್ನ ನಿರ್ಧಾರಿತ ಗುರಿ ತಲುಪುವಲ್ಲಿ ಹಾಗು ಉತ್ಕೃಷ್ಟ ಸೇವೆ ಸಲ್ಲಿಸುವಲ್ಲಿ ಸಹಕಾರಿಯಾಗುವದು.
- ತಮ್ಮ ವೃತ್ತಿಯ ಸರ್ವತೋಮುಖ ಬೆಳಣಿಗೆಗೆ ಯೋಗ್ಯ ಕೊಡುಗೆ ನೀಡುವದು.

## ☆☆☆☆☆ ಉದ್ಯೋಗದಾತರು

ಉದ್ಯೋಗದಾತರು ತಮ್ಮ ಸಾಂಸ್ಥಿಕ ಬದ್ಧತೆ ಹಾಗು ನಾಯಕತ್ವ ಮೌಲ್ಯಗಳ ಪ್ರದರ್ಶನದ ಮುಖಾಂತರ:

- ಪರಿಣಾಮಕಾರಿ ಸಿಬ್ಬಂದಿ ನೀತಿ ಹಾಗು ವಿಧಾನಗಳನ್ನು ಅಭಿವೃದ್ಧಿಪಡಿಸುವದು.
- ಸಿಬ್ಬಂದಿ ಕಲಿಕಾ ಮುಂದುವರಿಕೆಗೆ ಸಮಯ ಹಾಗು ನಿಧಿಯ ಸೂಕ್ತ ಹಂಚಿಕೆ ಮಾಡುವದು.
- ಉತ್ಕೃಷ್ಟ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳುವದು ಹಾಗು ಹೊಸ ಕಲಿಕೆಗೆ ಅವಕಾಶ ಒದಗಿಸಿಕೊಡುವದು.

## ಗ್ರಂಥಾಲಯ ಸಂಘಗಳು ☆☆☆☆☆

ಗ್ರಂಥಾಲಯ ಸಂಘಗಳು ಸಿಬ್ಬಂದಿ ಅಭಿವೃದ್ಧಿಯ ಪ್ರಾಮುಖ್ಯತೆಯನ್ನು ಪ್ರತಿಪಾದಿಸುವ ಮುಖಾಂತರ:

- ಉತ್ಕೃಷ್ಟವಾದ ನಿರಂತರ ವೃತ್ತಿಪರ ಅಭಿವೃದ್ಧಿ ಗಾಗಿ ನೀತಿ, ಸಂಪನ್ಮೂಲ ಹಾಗು ತಂತ್ರಗಳನ್ನು ಸಮನ್ವಯಗೊಳಿಸುವುದು.
- ಲಭ್ಯವಿರುವ ನಿರಂತರ ವೃತ್ತಿಪರ ಅಭಿವೃದ್ಧಿ ಅವಕಾಶಗಳ ಬಗ್ಗೆ ಸೂಕ್ತ ಮಾಹಿತಿ ಒದಗಿಸುವುದು.
- ನಿರಂತರ ವೃತ್ತಿಪರ ಅಭಿವೃದ್ಧಿಗಾಗಿ ಗ್ರಂಥಾಲಯ ಹಾಗು ಮಾಹಿತಿ ವಿಜ್ಞಾನ ಕ್ಷೇತ್ರದ ವೃತ್ತಿಪರರಿಗೆ ಪ್ರೋತ್ಸಾಹ ನೀಡುವುದು.

## ☆☆☆☆☆ ಗ್ರಂಥಾಲಯ ಶಿಕ್ಷಣತಜ್ಞರು

ಎಲ್.ಅಯ್.ಎಸ್. ಶಿಕ್ಷಣತಜ್ಞರು ಸಿ.ಪಿ.ಡಿ. ಪ್ರಾಮುಖ್ಯತೆಯನ್ನು ಪ್ರಚಾರಗೊಳಿಸುವ ಮುಖಾಂತರ:

- ವೃತ್ತಿಪರರಿಗೆ ಸ್ನಾತಕೋತ್ತರ ಪದವಿ ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಡುವುದು.
- ವೃತ್ತಿಪರ ಹಾಗು ಸರಕಾರಿ ಸಂಘಟನೆಗಳಿಗೆ ಸಿ.ಪಿ.ಡಿ. ಅವಶ್ಯಕತೆ ಹಾಗು ಅಭ್ಯಾಸಗಳ ಕುರಿತು ಸೂಕ್ತ ಸಲಹೆ ನೀಡುವುದು.
- ವಿದ್ಯಾರ್ಥಿ ಹಾಗು ವೃತ್ತಿಪರರನ್ನು ಸಂಶೋಧನಾ ಅಭ್ಯಾಸಗಳಲ್ಲಿ ತೊಡಗಿಸಿಕೊಳ್ಳುವುದು.

## ತರಬೇತುದಾರರು ☆☆☆☆☆

ಎಲ್.ಅಯ್. ಎಸ್. ತರಬೇತುದಾರರು ಉತ್ಕೃಷ್ಟ ಸಿ.ಪಿ.ಡಿ. ಚಟುವಟಿಕೆಗಳನ್ನು ಲಭ್ಯವಾಗಿಸುವ ಮುಖಾಂತರ:

- ಹೊಸ ವಿಷಯಗಳ ತಿಳುವಳಿಕೆ ಹಾಗು ಕೌಶಲ್ಯಾಭಿವೃದ್ಧಿಗೆ ಅವಕಾಶ ನಿರ್ಮಿಸಿಕೊಡುವುದು.
- ವಯಸ್ಕರ ಶಿಕ್ಷಣದ ತತ್ವ-ಸಿದ್ಧಾಂತ ಹಾಗು ಸೂಚನಾ ವಿನ್ಯಾಸಗಳ ಅನುಕರಣೆ ಮಾಡುವುದು
- ಸೂಕ್ತ ತಂತ್ರಜ್ಞಾನ, ಸಂಪನ್ಮೂಲ ಹಾಗು ಸೌಲಭ್ಯಗಳನ್ನು ಸರಿಯಾಗಿ ಬಳಸಿಕೊಳ್ಳುವುದು.

CC BY NC

ಐ.ಎಫ್.ಎಲ್.ಐ. ಸಿ.ಪಿ.ಡಿ. ಡಬ್ಲ್ಯೂ.ಎಲ್. ನ ರಚನೆ: ಗಿಲಿಯನ್ ಹಲ್ಲಮ್ ಹಾಗು ಜನ್ ಹರ್ಲೆಜ್ ; ಕನ್ನಡಕ್ಕೆ ಅನುವಾದ :ಆನಂದ ದೊಡಮನಿ ಹಾಗು ಸುಕನ್ಯಾ ದೊಡಮನಿ VENNGAGE